



# ಡೇರೆಯ ತೇರು

■ ಸೀಮಾ ಹೆಗಡೆ





ಸಂಡಿಗೆ ಕಡ್ಡಿ, ರಿಬ್ಬನ್ ಉಂಡೆ, ಗಿಡ್ಡ ಕಮಲಿ, ಲಿಲಿಪುಟ್ಟ, ಜಮಖಾನ್ ಪಟ್ಟೆ, ಯಜ್ಞಕುಂಡ, ಚಕ್ರ, ಜೂಲಾ, ಬೊಟ್ಟು, ಡಿಶ್, ಬೆಣ್ಣೆ ಬಿಳಿ, ಕೆಮ್ಮಣ್ಣು ಕೆಂಪು, ಪಂಚರಂಗಿ —ಪಾಟಿಕಲ್ಲಿನ ಹಾಸು ಅಂಗಳದಲ್ಲಿ ಸಾಲಾಗಿ ಜೋಡಿಸಿಟ್ಟ ಪ್ಲಾಸ್ಟಿಕ್ ಕವರ್‌ನಲ್ಲಿ ಚಿಗುರಿ ನಿಂತು, ಗೂಟಕ್ಕೆ ಆತುಕೊಂಡು, ಭಾರವಾಗಿ ನೆಲ ನೋಡುವ ಡೇರೆ ಹೂಗಳಿಗೆ ಮಲೆನಾಡಿನ ಹೆಂಗಳೆಯರು ಪ್ರೀತಿಯಿಂದ ಕರೆಯುವ ಹೆಸರುಗಳಿವು.

ಮಳೆಗಾಲವೆಂದರೆ ಒಬ್ಬೊಬ್ಬರದ್ದು ಒಂದೊಂದು ಸಂಭ್ರಮ. ನಮ್ಮೂರ ಹೆಂಗಸರದ್ದು ಸ್ವಲ್ಪ ವಿಶೇಷದ್ದೇನೋ ಅನಿಸುವುದು ಡೇರೆಯ ತೇರು ಎಳೆಯುವಾಗ.

ಮಳೆಗಾಲವಿಡೀ ಸ್ನೇಹಿತರು–ಸಂಬಂಧಿಕರ ಮನೆಯೆಲ್ಲಾ ತಿರುಗಾಡಿ ಗೆಡ್ಡೆ–ಹಿಳ್ಳು–ಮರಿ ತಂದು ಪಾಲಿಸಿ ಪೋಷಿಸಿ, ಒಮ್ಮೆಗೇ ಅಂಗಳದ ತುಂಬೆಲ್ಲಾ ಹೂಬಿಟ್ಟ ಡೇರೆ ವನ ನೋಡಲು ಎರಡು ಕಣ್ಣು ಸಾಲದು, ಬಣ್ಣಿಸಲು ಮಾತು ಸಾಲವು. ಹಸುರ ಗಿಡಗಳ ಮೇಲೆ ರಂಗು ಚೆಲ್ಲಿ, ಚೆಲುವೆಲ್ಲಾ ತಂದೆನ್ನುತ್ತಾ ನಗುವ ಡೇರೆಗಳ ಜಂಬ ಕಾಣದವರಾರು? ಜಿಟಿಜಿಟಿ ಮಳೆಯಲ್ಲಿ ನೆನೆಯುತ್ತಾ ತೊನೆಯುತ್ತಾ ಇರುವಾಗ ಅವುಗಳ ಬಣ್ಣಕ್ಕೆ ಮತ್ತೇರುವುದೂ ಸುಳ್ಳಲ್ಲ.

ಮೂಲ ವಿದೇಶಿಯಾದರೂ (ಮೆಕ್ಸಿಕೊ) ಉಳಿದೆಲ್ಲಾ ಹೂ ಬೆಳೆಗಿಂತಲೂ ತುಸು ಹೆಚ್ಚೇ ಮಾತ್ರ ಮಮತೆ ಇವುಗಳೆಡೆಗೆ. ಹತ್ತಾರು ದಶಕಗಳಿಂದ ನಡೆದ ತಳಿ ವಿನಿಮಯ ಇಂದು ಕಾಮನಬಿಲ್ಲಿನ ಬಣ್ಣಗಳನ್ನೂ ಮೀರಿದ ವರ್ಣವೈವಿಧ್ಯತೆಗೆ ಕಾರಣವಾಗಿದೆ. ನಮ್ಮೂರ ನಾರಿಯರ ಹೂತೋಟದಿಂದ ಸಂಗ್ರಹಿಸಿದ ಕೆಲವು ಚಿತ್ರಗಳ ಹೂಗುಚ್ಛ 'ಸುಧಾ' ಓದುಗರಿಗಾಗಿ... ■



